**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 1
ಸಿ.ಡಬ್ಲ್ಯೂಃ-2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶಶಿಕುಮಾರ್ |
| ತಂದೆಯ ಹೆಸರುಃ | : | ಎನ್.ಸಣ್ಣಯ್ಯ |
| ವಯಸ್ಸುಃ | : | 38 ವರ್ಷ |
| ವೃತ್ತಿಃ | : | ಪೋಲೀಸ್ ಕಾನ್ಸ್‌ಟೇಬಲ್, ಹಳ್ಳಿ ಮೈಸೂರು ಪೊಲೀಸ್ ಠಾಣೆ |
| ವಾಸಃ | : | ಹಳ್ಳಿ ಮೈಸೂರು. |

**ದಿನಾಂಕಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಇಲ್ಲಿಯವರೆಗೂ ನಾನು ಹಳ್ಳಿ ಮೈಸೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕೆಲಸ ಮಾಡುತ್ತಿದ್ದೇನೆ.

2. ಯಾಯಾಲಯದ ಮುಂದಿರುವ ಆರೋಪಿತ ಗೊತ್ತು. ದಿನಾಂಕಃ 20.07.2023 ರಂದು ನಾನು ದೊಡ್ಡಕಾಡನೂರು ಪೊಲೀಸ್ ಉಪ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಆರೋಪಿಯು ದೊಡ್ಡಕಾಡನೂರು ಪೊಲೀಸ್ ಉಪ ಠಾಣೆಗೆ ಬಂದು ತನ್ನ ಹೆಸರು ಚಂದ್ರಮೌಳಿ ಉಃ ಮುರುಳಿ ಬಿನ್ ಕೃಷ್ಣೇಗೌಡ, ಆಲಗೌಡನಹಳ್ಳಿ ವಾಸಿ ಎಂದು ತನ್ನ ಪರಿಚಯ ಮಾಡಿಕೊಂಡ. ನಂತರ

ಆರೋಪಿ ದಿನಾಂಕಃ 18.07.2023 ರಂದು ಆತನ ಪತ್ನಿ ಗಾರ್ಮೆಂಟ್ ಕೆಲಸಕ್ಕೆ ಹೋಗಿದ್ದವಳು ವಾಪಸ್ ಮನೆಗೆ ಬಾರದೆ ತನ್ನ ತವರೂರಾದ ಕಲ್ಲಹಳ್ಳಿ ಗ್ರಾಮಕ್ಕೆ ಹೋಗಿದ್ದು ತಾನು ದಿನಾಂಕಃ 19.07.2023 ರಂದು ತನ್ನ ಪತ್ನಿಗೆ ಫೋನ್ ಮಾಡಿ ಆಕೆ ಮನೆಗೆ ಬಾರದ ಬಗ್ಗೆ ಪ್ರಶ್ನಿಸಿದ್ದು ಆಕೆಯನ್ನು ಕರೆದುಕೊಂಡು ಬರಲು ಕಲ್ಲಹಳ್ಳಿ ಗ್ರಾಮಕ್ಕೆ ಹೋದಾಗ ಅಲ್ಲಿ ಆತ ಹಾಗೂ ಆತನ ಪತ್ನಿಯ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆಯಾಗಿದ್ದು ಈ ಬಗ್ಗೆ ಆತನ ಪತ್ನಿ ಹಳ್ಳಿಮೈಸೂರು ಠಾಣೆಯಲ್ಲಿ ದೂರು ನೀಡಿದ್ದು ಪೊಲೀಸರು ವಿಚಾರಣೆ ಮಾಡಿ ಹೊಂದಿಕೊಂಡು ಹೋಗುವಂತೆ ತಿಳಿಸಿದ್ದರು ಎಂದು ತಿಳಿಸಿದ. ಇದಾದ ನಂತರ ಆತನ ಪತ್ನಿ ಆತನ ಜೊತೆ ಬಾರದೆ ಕಲ್ಲಹಳ್ಳಿಗೆ ಹೋಗಿದ್ದು ನಂತರ ದಿಃ20.07.2023 ರ ಬೆಳಿಗ್ಗೆ ಆರೋಪಿತನ ಪತ್ನಿ ಆತನಿಗೆ ಫೋನ್ ಮಾಡಿ ಆಕೆಯ ಗಾರ್ಮೆಂಟಿನ ಐಡಿ ಕಾರ್ಡು ಹಾಗೂ ಮಾಸ್ಕ ಮನೆಯಲ್ಲಿದ್ದು ಅದನ್ನು ತೆಗೆದುಕೊಂಡು ಹಾಸನಕ್ಕೆ ಬಂದು ಫೋನ್ ಮಾಡುವಂತೆ ತಿಳಿಸಿದ್ದ ಕಾರಣದಿಂದ ತಾನು ತನ್ನ ಪತ್ನಿಯ ಐಡಿ ಕಾರ್ಡು ಹಾಗೂ ಮಾಸ್ಕ ಅನ್ನು ತೆಗೆದುಕೊಂಡು ಹಾಸನಕ್ಕೆ ತಂದು ತನ್ನ ಪತ್ನಿಗಾಗಿ ಕಾಯುತ್ತಿದ್ದಾಗ ಆತನ ಪತ್ನಿ ಅಂಬಿಕಾ ಬೇರೆ ಯಾರೋ ಯುವಕನ ಜೊತೆ ಬೈಕಿನಲ್ಲಿ ಹೊಳೆನರಸೀಪುರದ ಕಡೆಗೆ ಹೋಗಿದ್ದನ್ನು ನೋಡಿ ಅವರ ಬೈಕನ್ನು ತನ್ನ ಬೈಕಿನಲ್ಲಿ ಹಿಂಬಾಲಿಸಿಕೊಂಡು ಹೋಗಿ ಹೊಳೇನರಸೀಪುರದ ಹೇಮಾವತಿ ನದಿ ಸೇತುವೆ ಮೇಲೆ ಓವರ್ ಟೇಕ್ ಮಾಡಿ ಬೈಕನ್ನು ನಿಲ್ಲಿಸಿ ಬೈಕ್ ಚಾಲನೆ ಮಾಡುತ್ತಿದ್ದ ಯುವಕನಿಗೆ ಆತನಿಗೆ ಅಂಬಿಕಾ ರವರ ಜೊತೆ ಏನು ಸಂಬಂಧ ಎಂದು ಪ್ರಶ್ನಿಸಿ ಗದರಿಸಿದಾಗ ಆತ ಅಂಬಿಕಾ ರವರನ್ನು ಬೈಕಿನಿಂದ ಇಳಿಸಿ ಹೊರಟು ಹೋಗಿದ್ದು ನಂತರ ಆರೋಪಿತ ತನ್ನ ಪತ್ನಿಯನ್ನು ಬೈದು ಆಕೆಯನ್ನು ಹೊಳೇನರಸೀಪುರ ಬಸ್ ನಿಲ್ದಾಣಕ್ಕೆ ಕರೆತಂದಿದ್ದಾಗಿ ತಿಳಿಸಿದ. ಆರೋಪಿತ ಆತನಿಗೆ ತನ್ನ ಹೆಂಡತಿ ಅಂಬಿಕಾ ಅಕ್ರಮ ಸಂಬಂಧ

ಇಟ್ಟುಕೊಂಡಿರಬಹುದು ಎಂದು ಅನುಮಾನ ಬಂದಿದ್ದರಿಂದ ಅವಳನ್ನು ಸಾಯಿಸಬೇಕೆಂದು ತೀರ್ಮಾನ ಮಾಡಿಕೊಂಡು ಆಕೆಯನ್ನು ಊರಿಗೆ ಹೋಗೋಣ ಎಂದು ಬಸ್ಸಿನಲ್ಲಿ ಕರೆದುಕೊಂಡು ಬಂದು ಪೆದ್ದನಹಳ್ಳಿ ಗೇಟ್ ಬಳಿ ಬಸ್ ನಿಂದ ಇಳಿದು ಫಾರೆಸ್ಟಿನ ಒಳಗಡೆ ಕರೆದುಕೊಂಡು ಹೋಗುತ್ತಿದ್ದ ಕಾಲದಲ್ಲಿ ಅಲ್ಲಿ ಆರೋಪಿ ಹಾಗೂ ಆತನ ಪತ್ನಿನ ಅಂಬಿಕಾ ರವರ ನಡುವೆ ಮಾತಿಗೆ ಮಾತು ಬೆಳೆದು ಆರೋಪಿತ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆಯ ಕಪಾಳಕ್ಕೆ ಹೊಡೆದಿದ್ದು ಆಕೆ ಮೂರ್ಚೆ ಹೋದಾಗ ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಒಂದು ಕಲ್ಲು ತೆಗೆದುಕೊಂಡು ಅವಳ ತಲೆಯ ಮೇಲೆ ಎತ್ತಿಹಾಕಿ ಕೊಲೆ ಮಾಡಿರುವುದಾಗಿ ನನಗೆ ತಿಳಿಸಿದ.  ಆರೋಪಿತ ತಾನು ತನ್ನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡಿದಾಗ ಬೆಳಿಗ್ಗೆ 10.30 ಗಂಟೆ ಆಗಿರಬಹುದು ಎಂದು ತಿಳಿಸಿದ. ನಂತರ ನಾನು ಆರೋಪಿತ ನೀಡಿದ ಮಾಹಿತಿಯನ್ನು ಹಳ್ಳಿ ಮೈಸೂರು ಠಾಣಾ ಪಿಎಸ್ಐ ರವರಿಗೆ ತಿಳಿಸಿದಾಗ ಅವರು ಎಸ್ ಅಂಕನಹಳ್ಳಿ ಗ್ರಾಮವು ಹೊಳೇನರಸೀಪುರ ಗ್ರಾಮಾಂತರ ಠಾಣಾ ವ್ಯಾಪ್ತಿಗೆ ಒಳಪಡುವುದರಿಂದ ಆರೋಪಿಯನ್ನು ಗ್ರಾಮಾಂತರ ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸುವಂತೆ ತಿಳಿಸಿದ ಮೇರೆಗೆ ನಾನು ಆರೋಪಿಯನ್ನು ಮುಂದಿನ ಕ್ರಮದ ಬಗ್ಗೆ ದಿಃ20.07.2023ರ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಒಂದು ವರದಿಯೊಂದಿಗೆ ಹೊಳೇನರಸೀಪುರ ಗ್ರಾಮಾಂತರ ಠಾಣೆಯ ಠಾಣಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಅವರ ವರದಿಯನ್ನು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿಯನ್ನು ನ್ಯಾಯಾಲಯದ ಮುಂದೆ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಜೆ ಆರ್ ವಕೀಲರಿಂದಃ**

2. ದೊಡ್ಡಕಾಡನೂರು ಪೊಲೀಸ್ ಉಪ ಠಾಣೆಯಲ್ಲಿ ಸಿಸಿ ಕ್ಯಾಮೆರಾ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿತ ನನಗೆ ನೀಡಿದ ಮಾಹಿತಿಯ ನಂತರ ನಾನು ಆರೋಪಿತನನ್ನು ಕೃತ್ಯ ನಡೆದಿರುತ್ತದೆ ಎನ್ನಲಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಕೃತ್ಯ ನಡೆದಿರುತ್ತದೆ ಎನ್ನಲಾದ ಸ್ಥಳವನ್ನು ನೋಡಿರುವುದಿಲ್ಲ. ಆರೋಪಿತ ನನ್ನ ಮುಂದೆ ನಿಪಿ-1 ರಲ್ಲಿ ನಾನು ಕಾಣಿಸಿರುವ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಆರೋಪಿತ ನಿಪಿ-1 ರಲ್ಲಿ ಕಾಣಿಸಿರುವ ಮಾಹಿತಿಯನ್ನು ನೀಡಿರುತ್ತಾನೆ ಎಂದು ಸುಳ್ಳು ಮಾಹಿತಿಯನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತನ ಪತ್ನಿಯ ಸಾವಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಆತನ ಪತ್ನಿಯ ಸಾವಿಗೆ ಕಾರಣ ಎಂದು ನನ್ನ ಮುಂದೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತಿಳಿಸಿರುವಂತೆ ಆರೋಪಿತನನ್ನು ನನ್ನ ಮೇಲಾಧಿಕಾರಿಯವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.